• "ಅರಿವೇ ಗುರು" ಎಂಬಂತೆ, ಅರಿವು ಹಾಗೂ ಸೂಕ್ತ ಎಚ್ಚರಿಕೆಯೊಂದೇ ಏಡ್ಸ್‌ನ್ನು ತಡೆಗಟ್ಟಬಲ್ಲದು ಎಂಬ ಉದ್ದೇಶದಿಂದ ರಾಜ್ಯಾದ್ಯಂತ ವಿವಿಧ ಮಾಧ್ಯಮಮಗಳ ಮೂಲಕ HIV/AIDS ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ಸಹ ತುಂಬಾ ತೀವ್ರವಾಗಿ ಕೈಗೊಳ್ಳಲಾಗಿದೆ

69 (219) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್ಬುರ್ಗ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು,

ಆ) ಇವುಗಳಿಗೆ ಯಾವ ಯಾವ ವರ್ಷದಲ್ಲಿ ಮಂಜೂರಾತಿಯನ್ನು ನೀಡಲಾಗಿದೆ ,

ಇ) ಇದನ್ನು ಯಾವ ಯಾವ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ ,

ಈ) ಇದಕ್ಕೆ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಒಪ್ಪಿಗೆ ಪಡೆಯಲಾಗಿದೆಯೇ ,

ಉ) 2004–05ರಿಂದ ಪ್ರಾರಂಭವಾದ ಹೊಸ ವೈದ್ಯಕೀಯ ಕಾಲೇಜುಗಳಿಗೆ. ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಸರ್ಕಾರವು ಒದಗಿಸಿದೆಯೇ ,

ಊ) ಇವುಗಳಲ್ಲಿ ವೈದ್ಯರು ಮತ್ತು ವೈದ್ಯಕೇತರ ಸಿಬ್ಬಂದಿಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ,

ಋ) ಇಲ್ಲವಾದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) 7

ಆ) ಬಿಎಂಸಿ ಬೆಂಗಳೂರು – 1924
ಎಂಎಂಸಿ ಮೈಸೂರು – 1955
ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ – 1997
ವಿಜಯನಗರ ವೈದ್ಯಕೀಯ ವಿಜ್ಞಾನಗಳ ನಂಸ್ಥೆ, ಬಳ್ಳಾರಿ – 1994
ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾವಿ – 2006
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ – 2006
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ – 2006

ಇ) ಬೆಂಗಳೂರು, ಮೈಸೂರು, ಧಾರವಾಡ, ಬಳ್ಳಾರಿ, ಬೆಳಗಾಂ, ಹಾಸನ ಮತ್ತು ಮಂಡ್ಯ

ಈ) ಹೌದು

ಉ) ಹೌದು

ಊ) ಇವುಗಳಲ್ಲಿ ವೈದ್ಯರು ಮತ್ತು ವೈದ್ಯಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಕೊರತೆ ಇರುವ ಕಡೆ ಹುದ್ದೆಗಳನ್ನು ನೇಮಕಾತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಋ) ಕೊರತೆ ಇರುವ ಕಡೆ ಹುದ್ದೆಗಳನ್ನು ನೇಮಕಾತಿ ಮಾಡಲಾಗುತ್ತಿದೆ

70 (220) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ)) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೇ ,

ಆ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಹೊಸದಾಗಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು ,

ಇ) ಜಿಲ್ಲೆಗಳನ್ನು ಆಯ್ಕೆ ಮಾಡುವಾಗ ಅನುಸರಿಸಲಾಗುವ ಮಾನದಂಡವೇನು ,

ಈ) ಆಯ್ಕೆ ಮಾಡುವಾಗ ಡಾ ನಂಜುಂಡಪ್ಪನವರು ಸರ್ಕಾರಕ್ಕೆ ಸಲ್ಲಿಸಲಾದ ಅಸಮತೋಲನ ನಿವಾರಣೆಯಂತೆ ಹಿಂದುಳಿದ ಜಿಲ್ಲೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೇ ?

ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಹೌದು

ಆ) ಕೇಂದ್ರ ಸರ್ಕಾರ ಅನುಮತಿ ನೀಡಿದಲ್ಲಿ ರಾಯಚೂರು, ಬೀದರ್ ಮತ್ತು ಶಿವಮೊಗ್ಗದಲ್ಲಿ ಪ್ರಾರಂಭ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು

ಇ) ಆದ್ಯತೆ ಮತ್ತು ಅಗತ್ಯಕ್ಕನುಗುಣವಾಗಿ

ಈ) ಹೌದು

72 (138) ಶ್ರೀ ಬಸವರಾಜ್ ಹೆಚ್ ಡಿ (ವಿರಾಜಪೇಟೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಶಿಷ್ಟ ಪಂಗಡಗಳ ಪಟ್ಟಿಗೆ ಮೇದಾರ ಜನಾಂಗವನ್ನು ಸೇರಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿರುವುದು ನಿಜವಲ್ಲವೇ ,

ಆ) ಸದರಿ ಜನಾಂಗವನ್ನು ಈವರೆವಿಗೂ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸದೆ ಇರುವುದರಿಂದ ಆರ್ಥಿಕ ಹಾಗೂ ಶೈಕ್ಷಣಿಕವಾಗಿ ತುಂಬಾ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ರಾಜ್ಯ ಸರ್ಕಾರವು ಈಗಲಾದರೂ ಕೇಂದ್ರ ಸರ್ಕಾರವು ಸದರಿ ಪ್ರಸ್ತಾಪನೆಗೆ ಅಂಗೀಕಾರ ನೀಡುವಂತೆ ಒತ್ತಾಯ ಮಾಡುವುದೇ ?

ಶ್ರೀ ಬಾಲಚಂದ್ರ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು